
# ನನ್ನಕ್ಕ



ಈಕೆ
ಅಕ್ಕನಂತೆ ಮನೆಬಿಟ್ಟವಳಲ್ಲ
ಸೀತೆಯಂತೆ ಕಾಡು ಸೇರಿದವಳಲ್ಲ
ಅಹಲ್ಯೆಯಂತೆ ಕಲ್ಲಾದವಳಲ್ಲ...

ಮನೆಯೊಳಗೆ ಉಳಿದವಳಿವಳು
ಸಾಮಾನ್ಯರಲ್ಲಿ ಸಾಮಾನ್ಯರಾದವಳು
ಆಡುವ ವಯಸ್ಸಿನಲ್ಲೇ ಮದುವೆಯಾದವಳು
ಸಂಸಾರಕೆ ಸಾರವನ್ನೆ ತೇಯ್ದವಳು
ಬದುಕನ್ನು ತನ್ನವರಿಗೆ ಮುಡಿಪಿಟ್ಟವಳು...

ಶುಕ್ರವಾರ ಉಪವಾಸ ಇರುವವಳು
ಊರ ಮಾರಮ್ಮನ ಆರಾಧಕಳು
ಎಡಬಿಡದೇ ವ್ರತ ಪೂಜೆ ತೊಡುವವಳು
ಕಷ್ಟ ಬಂದಾಗ ಮಾರಮ್ಮನೊಂದಿಗೆ ಜಗಳವಾಡುವವಳು
ತನಗಾಗಿ ಏನನ್ನೂ ಬೇಡದವಳು
ಕೈಚಾಚಿ ಬಂದವರಿಗೆ ನೆರವಾದವಳು...

ಈಕೆ
ಮನೆಯೊಳಗೆ ನುಡಿದವಳು
ಹೊರಮನೆಯನ್ನು ನಡೆಸಿದವಳು
ಒಳಗಿಂದಲೇ ದುಡಿದು
ಜಗತ್ತನ್ನು ಕಾಯ್ದವಳು...

ಈಕೆ ನನ್ನಕ್ಕ
ನಮ್ಮೆಲ್ಲರ ದುಃಖಗಳಿಗೆ ದಿಕ್ಕಾದವಳು

● **ಆಶಾ ಎ. ಶಿವಮೊಗ್ಗ**
ಕಲೆ: ಡಿ.ಕೆ. ರಮೇಶ್

